

## ಹಂಚಿ ತಿನ್ನುವ ಪಾಠ ಕಲಿಸಿದ್ದು

■ ಸುಮತಿ. ಕೆ. ನಾಯ್ಕ,
ಶಿಕ್ಷಕಿ, ಸ. ಹಿ. ಪ್ರಾ. ಶಾಲೆ. ಕಡಕೇರಿ, ಸಿದ್ದಾಪುರ, ಉತ್ತರ ಕನ್ನಡ

**ಗೊತ್ತಿಲ್ಲದೂರು,** ತಿಳಿಯದ ಭಾಷೆ. ಅಳುಕಿನಲ್ಲೇ ಶಾಲೆಗೆ ಮೊದಲ ಹೆಜ್ಜೆ ಇಟ್ಟಿದ್ದೆ. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ, ಕಿರವತ್ತಿ ಗ್ರಾಮದ ಬೈಲಂದೂರ ನನ್ನ ಮೊದಲ ಕಾರ್ಯಕ್ಷೇತ್ರ. 'ಎದೆಗಿಳಿವುದು ಹಾಗೇ ಎದೆಗಿಳಿಸಿಕೊಳ್ಳುವುದು ನೀ ಮಾಡಬೇಕಾದ ಮುಖ್ಯ ಕೆಲಸ' ಎನ್ನುವ ನನ್ನ ಗುರುಗಳಾದ ದಿ. ವಿಠಲ್ ಸರ್ (ಚಿಂತಕರು, ಹೋರಾಟಗಾರರು, ಉತ್ತರ ಕನ್ನಡ) ಮಾತು ನನಗಿದ್ದ ದೊಡ್ಡ ಧೈರ್ಯ. ಮಕ್ಕಳನ್ನ ಮೆಚ್ಚುವ ನನಗೆ ಅದೇನು ದೊಡ್ಡ ಕಷ್ಟವಾಗಲಿಲ್ಲ.

ನನಗೂ ಶಾಲೆಗೂ ಐದು ಕಿಲೋಮೀಟರ್‌ಗಳ ಅಂತರ. ಬಸ್ಸಿನ ಓಡಾಟವಿಲ್ಲದ, ನೆಟ್‌ವರ್ಕ್‌ನ ಹೆಸರಿಲ್ಲದ ಊರದು. ನಾನಿದ್ದ ಶಾಲೆಯ ಮಕ್ಕಳಲ್ಲಿ ಹಸಿದು ಬರುವವರ ಸಂಖ್ಯೆಯೇ ಜಾಸ್ತಿ. ಚೂರುಪಾರು ಕಾಸಿದ್ದವರು ತಮ್ಮ ಮಕ್ಕಳಿಗೆ ತಿಂಡಿ ಕೊಡಿಸಿ ಶಾಲೆಗೆ ಕಳಿಸಿದರೆ, ಏನು ಇಲ್ಲದ ಮಕ್ಕಳು ಸುಮ್ಮನೆ ಅವರು ತಿನ್ನುವುದನ್ನು ನೋಡುತ್ತಿದ್ದರು. ಇದನ್ನು ಸರಿಪಡಿಸಬೇಕೆಂದೇ ಮಕ್ಕಳಿಗೆ 'ಯಾರೂ ತಿಂಡಿ ತರಬಾರದು. ತಂದರೆ, ಉಗುರಿನಷ್ಟು ಬಂದರೂ ಸರಿಯೇ ಹಂಚಿ ತಿನ್ನಬೇಕು' ಎಂದು ತಾಕೀತು ಮಾಡಿದ್ದೆ. ಹಂಚಿ ತಿನ್ನಲು ಸಮಯ ಕೂಡ ನಿಗದಿ ಮಾಡಿದ್ದೆ. ಹಂಚಿ ತಿನ್ನುವ ಗುಣ ಬೆಳೆಸುವುದರೊಂದಿಗೆ ಸ್ವಲ್ಪವಾದರೂ ಮಕ್ಕಳ ಹಸಿವು ನೀಗಲಿ ಎನ್ನುವುದು ನನ್ನ ಉದ್ದೇಶ. ಮಾರನೆಯ ದಿನ ನನ್ನ ಟೇಬಲ್ ಮೇಲೆ ತಹರೇವಾರಿ ತಿಂಡಿಗಳ ತುಂಡುಗಳು ಒಪ್ಪವಾಗಿ ಕೂತು ನನ್ನ ದಾರಿ ಕಾಯುತ್ತಿದ್ದವು. ನಾ ಕಲಿಸಿದ ಪಾಠ ನನಗೇ ಮತ್ತೊಂದು ಪಾಠ ಕಲಿಸಿತ್ತು. ತಕ್ಷಣ ಒಂದಿಷ್ಟು ತಿಂಡಿ ತರಿಸಿ ಮಕ್ಕಳೊಂದಿಗೆ ಹಂಚಿ ತಿಂದೆ. ಅವರ ಖುಷಿ ನನ್ನ ಹೊಟ್ಟೆ ತುಂಬಿಸಿತ್ತು.

ಈ ಆರು ವರ್ಷಗಳಲ್ಲಿ ಬರೆದು ಮುಗಿಯಲಾರದಷ್ಟು ಇಂತಹ ನೆನಪಿನಲ್ಲುಳಿಯುವ ಘಟನೆಗಳಿವೆ.

ಬೈದರೂ ಹೂವು ಹಿಡಿದು ನನಗಾಗಿ ಕಾಯುವ, ನಡೆದರೆ ಸೀರೆ ಚೂರೂ ಮಡಚದಂತೆ ಜೋಪಾನ ಮಾಡುವ, ನನ್ನ ಹುಟ್ಟುಹಬ್ಬವನ್ನ ಹಬ್ಬದಂತೆ ಆಚರಿಸುವ, ದಾರಿಯಲ್ಲಿ ಸಿಕ್ಕಾಗಲೂ ನೆನಪಿಟ್ಟು ಮಾತಾಡಿಸುವ, ಬೇರೆ ಶಾಲೆಗೆ ಬಂದಿದ್ದರೂ ಆಗಾಗ ಕರೆ ಮಾಡಿ ಆರೋಗ್ಯ ವಿಚಾರಿಸುವ, ನನ್ನನ್ನು ಅಪಾರವಾಗಿ ಪ್ರೀತಿಸುವ ಮಕ್ಕಳ ಕಂಡಾಗಲೆಲ್ಲ ಸಿಕ್ಕ ಬೇರೆ ಕೆಲಸ ಬಿಟ್ಟು ಇದೇ ಬೇಕು ಎಂದು ಬಂದಿದ್ದಕ್ಕೂ ಸಾರ್ಥಕ ಎನಿಸುತ್ತದೆ. ಶಿಕ್ಷಕರ ಸಮಸ್ಯೆಗಳು ಸಾವಿರ ಇದ್ದರೂ ಮಕ್ಕಳ ಜೊತೆ ಬೆರೆತಾಗ ಎಲ್ಲ ಮರೆಯುತ್ತವೆ. ಪ್ರಸ್ತುತ ಸಿದ್ದಾಪುರ ತಾಲೂಕಿನ ಕಡಕೇರಿಯಲ್ಲಿ ಮತ್ತದೇ ಹೊಸ ಪಯಣ, ಹೊಸ ಸವಾಲು, ಹೊಸ ಬಣ್ಣ. ■

ಜ್ಞಾಪಕ ಚಿತ್ರಶಾಲೆ


ಮುಖಪುಟ

## 'ಶಾಮಂತಿ' ಘಮ

■ ಎಸ್. ಕಲಾಧರ್
ಶಿಕ್ಷಕರು, ಶಿಡ್ಲಘಟ್ಟ, ಚಿಕ್ಕಾಬಳ್ಳಾಪುರ ಜಿಲ್ಲೆ

ನಾನು ಮೊದ್ಲು ಮೇಷ್ಟ್ರಾಗಿ ಕೆಲಸಕ್ಕೆ ಸೇರಿದ್ದು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಕನ್ನಮಂಗಲ ಅನ್ನೋ ಹಳ್ಳಿಯ ಸರ್ಕಾರಿ ಶಾಲೆಯಲ್ಲಿ. ನಾನು ಇಂಗ್ಲಿಷ್ ಮೇಷ್ಟ್ರಾದ್ರೂ ಕನ್ನಡ ನನ್ನ ಮತ್ತು ಮಕ್ಕಳ ಮಧ್ಯದ ಸಂವಹನ ಭಾಷೆಯಾಗಿತ್ತು. ನನಗೆ ಪಾಠದ ಮಧ್ಯೆ ಮಕ್ಕಳನ್ನು ಮಾತಾಡಿಸ್ತಾ, ಅವರೂ ಮಾತಾಡುವ ಹಾಗೆ ಪ್ರೇರೇಪಿಸ್ತಾ ಪಾಠ ಮಾಡುವುದು ಬಹಳ ಇಷ್ಟ. ಹಾಗೆ ಮಾತಾಡೋವಾಗಲೆಲ್ಲಾ ಮಕ್ಕಳು ತಮ್ಮ ಕಷ್ಟ–ಸುಖಗಳ ಬಗ್ಗೆ, ತಮ್ಮ ಸುತ್ತಮುತ್ತಲಿನ ಜನಗಳ ಬಗ್ಗೆ ತುಂಬ ಸಹಜವಾಗಿ ಮಾತಾಡ್ತಿದ್ರು. ನೋವಾಗ್ತಿದ್ದಿದ್ದು ಏನಂದ್ರೆ, ಈ ಥರದ ಮಕ್ಕಳ ಮಾತುಗಳಿಗೆ ಒಂದು ಸರಿಯಾದ ಮಾನ್ಯತೆ ಸಿಕ್ಕಿಲ್ಲವಲ್ಲ ಅಂತನ್ನೋದು. ಈ ಕೊರಗು ನಿವಾರಿಸಿಕೊಳ್ಳೋಕೆ ಅಂತ್ಲೇ ಮಕ್ಳ ಜೊತೆ ಸೇರಿ ಒಂದು ವಾಲ್ ಮ್ಯಾಗಝಿನ್ ಮಾಡ್ದೆ. ಮಕ್ಳು ಖುಷಿಪಟ್ರು. ಅವ್ರ ಆ ಸ್ಪಂದನ ನೋಡಿ ಇನ್ನೂ ಖುಷಿಯಾಗಿ ಯಾಕೆ ಮಕ್ಳದೇ ಒಂದು ಪುಸ್ತಕ ಮಾಡಬಾರ್ದು ಅಂತ ಕೂಡ ಅನಿಸಿಬಿಡ್ತು.

ಮಕ್ಳ ಪುಸ್ತಕ ಮಾಡೋದು ಅಂದ್ರೆ ಮಕ್ಕಳಾಟವಾ? ಆದ್ರೂ ಅನಿಸಿದ್ದು ಮಾಡೋದ್ರಲ್ಲಿ ಏನೋ ಒಂಥರ ಥ್ರಿಲ್






## ಮರೆಯಾದ ಶಿಷ್ಯನ ಮರೆಯದ ನೆನಪು

■ ಮಂಜು ಕೊಡಗು
ಶಿಕ್ಷಕ, ರಂಗನಿರ್ದೇಶಕ

**ಮೇಷ್ಟ್ರು** ಕೆಲಸ ಮಾಡೋದು ಅಂದ್ರೆ ನನಗೆ ಈಗಲೂ ಹೆಮ್ಮೆ. ಭಾರತದಾದ್ಯಂತ ಅಲ್ಲದೇ ಕೆಲವು ವಿದೇಶಿ ಮಕ್ಕಳು ನನ್ನ ಪಾಠ ಕೇಳಿದ್ದಾರೆ, ನನ್ನೊಂದಿಗೆ ನಾಟಕದ ಕೆಲಸ, ಅಭಿನಯದ ಕೆಲಸ ಕಲಿತು, ನನ್ನನ್ನು ಆತ್ಮದಲ್ಲಿರಿಸಿಕೊಂಡು ಆರಾಧಿಸುತ್ತಿದ್ದಾರೆ ಅನ್ನೋ ಸಂಗತಿ ನನಗೆ ಯಾವಾಗಲೂ ಮುಜುಗರದ ಜೊತೆಗೆ ಹೆಮ್ಮೆಯೆನಿಸುತ್ತದೆ.

ಕೆಲವು ವರ್ಷಗಳ ಹಿಂದೆ ನನ್ನ ಶಿಷ್ಯನಾಗಿದ್ದ ನವೀನ ನಮ್ಮಿಂದ ಮರೆಯಾದ. ನನ್ನ ಕೆಲಸದ ರೀತಿ, ನಾನಾಡುವ ಮಾತುಕತೆಯಿಂದ ಬಹಳಷ್ಟು ಪ್ರಭಾವಿತನಾದವ. ಆತ ಉಜಿರೆ ಕಾಲೇಜು ವಿದ್ಯಾರ್ಥಿಗಳಿಗಾಗಿ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕ ಸಿದ್ಧಪಡಿಸಿದ್ದ. ಆ ನಾಟಕದ ಪ್ರದರ್ಶನ ಸುಳ್ಯದ ಪಂಜದಲ್ಲಿತ್ತು. ಹಿಂದಿನ ದಿನ ಕಾಲೇಜು ತಂಡದವರು ಪಂಜಕ್ಕೆ ಬರುವಾಗ ಮಾಡಿಕೊಳ್ಳಬೇಕಾದ ತಯಾರಿಮಾಡಿದ ನವೀನ, ತಾನು ಅಂದೇ ಪಂಜಕ್ಕೆ ಬಂದು ಸ್ಥಳೀಯ ಸಂಘಟನೆಯೊಡನೆ ಸೇರಿಕೊಂಡು ಪ್ರದರ್ಶನದ ಸಿದ್ಧತೆ ನಡೆಸಿದ್ದ. ನಾಟಕ ನಡೆವ ದಿನದಂದು ತಾನು ಮುಂಜಾನೆ ಐದುಗಂಟೆಗೆ ಬೈಕ್ ಏರಿ ನಾಟಕ ತಂಡದವರನ್ನು ಕರೆತರಲು ಹೊರಟ. ಮಂಜು ಮುಸುಕಿದ ದಾರಿಯಲ್ಲಿ ಎದುರಿನಿಂದ ಮರಳು ತುಂಬುವ ಲಾರಿಗೆ ಡಿಕ್ಕಿ ಹೊಡೆದು ಸುಮಾರು ಒಂದು ತಾಸು ಅಲ್ಲೇ ನರಳಿ ನಮ್ಮಿಂದ ದೂರವಾದ.



ಬೆಳಿಗ್ಗೆ ಏಳು ಗಂಟೆಗೆ ಆ ದಾರಿಯಲ್ಲಿ ಜನರ ಓಡಾಟ ಶುರುವಾದಾಗ